**OS. No. 23/2021** **PW – 1**

ಪ್ರಮಾಣೀಕರಿಸಲಾದ ದಿನಾಂಕಃ **20.06.2025.**

ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಕೆ. ಪಿ. ಬಿ ವಕೀಲರಿಂದಃ

ನನ್ನ ತಂದೆ ಮೊದಲಿಂದಲೂ ಚಾಲಕರು ಎಂದರೆ ಸರಿ. ಇವರು Umail estate Kutta ಚಾಲಕರಾಗಿದ್ದರು ಎಂದರೆ ಸರಿ. ಒಂದನೇ ಪ್ರತಿವಾದಿಯ ತಂದೆ ಯಾವಾಗ ತೀರಿಕೊಂಡರು ಗೊತ್ತಿಲ್ಲ. ನಾನು ಅವರನ್ನು ನೋಡಿಲ್ಲ. ನಾನು ದಾವಾಸ್ವತ್ತನ್ನು ಹುಟ್ಟಿದಾಗಿಂದಲೂ ನೋಡಿದ್ದೇನೆ. ನಾನು 1968 ರಲ್ಲಿ ಹುಟ್ಟಿದ್ದು. ಒಂದನೇ ಮತ್ತು ಎರಡನೇ ಪ್ರತಿವಾದಿ ಗೊತ್ತು. ಚಿಕ್ಕವಯಸ್ಸಿನಿಂದಲೂ ಇವರು ಪರಿಚಯ. ಎರಡನೇ ಪ್ರತಿವಾದಿ ನನ್ನ ಅತ್ತೆ. ಪ್ರತಿವಾದಿಗಳು ದಾವಾಸ್ವತ್ತನಲ್ಲಿ ವಾಸವಿರಲಿಲ್ಲ, ಬೆಂಗಳೂರಿನಲ್ಲಿದ್ದರು. ರಜಾ ದಿನಗಳಲ್ಲಿ ದಾವಾಸ್ವತ್ತಿಗೆ ಬಂದು ಹೋಗುತ್ತಿದ್ದರು. ನನ್ನ ತಂದೆಗೆ ದಾವಾಸ್ವತ್ತು ಹೇಗೆ ಬಂದು ಎಂದು ದಾಖಲೆ ಇಲ್ಲ ಎಂದರೆ ಸರಿ. ಎರಡನೇ ಪ್ರತಿವಾದಿ ನನ್ನ ತಂದೆಯ ತಂಗಿಯಾದ್ದರಿಂದ ವಿಶ್ವಾಸದಲ್ಲಿ ಆಕೆಯು ಮತ್ತು ಒಂದನೇ ಪ್ರತಿವಾದಿಯ ತಂದೆ ದಾವಾಸ್ತಿಯನ್ನು ನೋಡಿಕೊಳ್ಳಿ ಎಂದು ಹೇಳಿದ್ದರು ಎಂದರೆ ಸರಿಯಲ್ಲ. ಈ ರೀತಿ ಅನುಮತಿ ಕೊಟ್ಟಿದ್ದಕ್ಕೆ ನನ್ನ ತಂದೆ ಆಸ್ತಿಯನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಪ್ರತಿವಾದಿಗಳು ರಜಾದಿನಗಳಲ್ಲಿ 10 ದಿನಗಳ ಕಾಲ ಬಂದು ದಾವಾಸ್ತಿಯಲ್ಲಿ ಇರುತ್ತಿದ್ದರು.

ದಾವಾಸ್ವತ್ತಿನಲ್ಲಿರುವ ಮನೆ ಅರ್ಧ ಕಟ್ಟಡವನ್ನು ಒಂದನೇ ಪ್ರತಿವಾದಿಯ ತಂದೆ ಕಟ್ಟಿದ್ದು, ಅರ್ಧಕ್ಕೆ ನಿಂತ ಕಟ್ಟಡವನ್ನು ನನ್ನ ತಂದೆ ಪೂರ್ತಿ ಕಟ್ಟಿಸಿರುತ್ತಾರೆ. ನನ್ನ ತಂದೆ ಈ ಬಗ್ಗೆ ಹೇಳಿದರು. ಈ ರೀತಿ ಯಾವುದೇ ಕಟ್ಟಡ ನನ್ನ ತಂದೆ ಕಟ್ಟಿಲ್ಲ, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಂಪೂರ್ಣ ಕಟ್ಟಡ ಒಂದನೇ ಪ್ರತಿವಾದಿಯ ತಂದೆ ಕಟ್ಟಿದರು ಎಂದರೆ ಸರಿಯಲ್ಲ. ಒಂದನೇ ಪ್ರತಿವಾದಿಯ ತಂದೆ Building contractor ಆಗಿದ್ದು ಕಟ್ಟಿಸಿರುತ್ತಾರೆ ಎಂದರೆ ಸರಿಯಲ್ಲ. ನಿ. ಪಿ. 1 ರಿಂದ 3 ಪಿ. ಡಿ. ಓ ರವರು ನೀಡಿದ್ದು, ಆತ ಖುದ್ದು ಪರಿಚಯ ಇಲ್ಲ. ಈ ದಾಖಲೆಗಳನ್ನು ಪಿ. ಡಿ. ಓ ರವರು ಜೊತೆ ಸೇರಿ ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಿ. ಪಿ. 7 ರಿಂದ 13 ದಾಖಲೆಗಳಲ್ಲಿ current bill ಯಾರು ಕಟ್ಟಿದ್ದರೂ ಎಂದು ನಮೂದು ಇಲ್ಲ ಎಂದರೆ ಸರಿ. ಈ ಬಿಲ್ಲುಗಳು ಸೃಷ್ಟಿತ ದಾಖಲೆಗಳು ಎಂದರೆ ಸರಿಯಲ್ಲ.

ನಿ. ಪಿ. 16 ಒಂದನೇ ಪ್ರತಿವಾದಿಯ ಹೆಸರಿನಲ್ಲಿದೆ ಎಂದರೆ ಸರಿ. ದಾವಾ ಸ್ವತ್ತಿನ ಹಳೆಯ ಜಮಾಬಂಧಿ ನಿ. ಪಿ. 17 ರಂತೆ ಎರಡನೇ ಪ್ರತಿವಾದಿಯ ಹೆಸರಿನಲ್ಲಿದೆ ಎಂದರೆ ಸರಿ. ನಿ. ಪಿ. 18 ರಿಂದ ನಿ. ಪಿ. 46 ಪತ್ರಗಳಲ್ಲಿ ಒಂದನೇ ಪ್ರತಿವಾದಿ ನನ್ನ ತಂದೆಯಿಂದ ಹಣ ಕೇಳಿದ ಸಂಬಂಧದ ದಾಖಲೆಗಳಾಗಿರುತ್ತವೆ. ಈ ಪತ್ರಗಳನ್ನು ಜೆರ್ರಿ ಡಿ ಕೋರ್ಸ್ ಬರೆದಿದ್ದಾರೆ ಎಂದರೆ ಅವರನ್ನು ಆ ರೀತಿಯೂ ಕರೆಯುತ್ತಾರೆ. ಒಂದನೇ ಪ್ರತಿವಾದಿಗೆ ಅಂತಹ ಹೆಸರು ಇಲ್ಲ ಸುಳ್ಳು ದಾಖಲೆಗಳು ಆಗಿರುತ್ತವೆ ಎಂದರೆ ಸರಿಯಲ್ಲ. ಈ ಪತ್ರಗಳು Umail estate ವಿಳಾಸಕ್ಕೆ ಕಳುಹಿಸಿದ್ದಾರೆ ಎಂದರೆ ಸರಿ. ದಾವಾ ಸ್ವತ್ತಿನ ವಿಳಾಸಕ್ಕೆ ಕಳುಹಿಸಿಲ್ಲ ಎಂದರೆ ಸರಿ, ಆ ವಿಳಾಸಕ್ಕೆ ಪತ್ರಗಳು ಬರುತ್ತಿರಲಿಲ್ಲ ಸಾಕ್ಷಿಯು ದಾವಾಸ್ವತ್ತಿನ ಮನೆಯನ್ನು ಫೋಟೋದಲ್ಲಿ ನೋಡಿ ಗುರುತಿಸಿದ್ದು ಅದನ್ನು ನಿ. ಡಿ 1 ರಿಂದ 4 ಎಂದು ಗುರುತಿಸಲಾಯಿತು. ಮೊದಲಿನಿಂದಲೇ ಪ್ರತಿವಾದಿಗಳು ದಾವಾಮನೆಯ ಸ್ವಾಧೀನದಲ್ಲಿದ್ದು ಮಕ್ಕಳ ವಿದ್ಯಾಭ್ಯಾಸಕ್ಕೆಂದು ಬೆಂಗಳೂರಿಗೆ ಹೋಗಿದ್ದು ಅದನ್ನು ದುರುಪಯೋಗಪಡಿಸಿಕೊಂಡು ಈ ಮನೆ ನನ್ನದು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾಮನೆಯ ಹೊಡೆದುಕೊಳ್ಳಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

Sd/xxx-
ಸಿವಿಲ್ ನ್ಯಾಯಾಧೀಶರು, ಪೊನ್ನಂಪೇಟೆ.